

1983ರ ವಿಶ್ವಕಪ್ ಚಾಂಪಿಯನ್ನರಾದ ಕಪಿಲ್ ದೇವ್, ಕ್ರಿಸ್ ಶ್ರೀಕಾಂತ್, ರೋಜರ್ ಬಿನ್ನಿ ಹಾಗೂ ಸಯ್ಯದ್ ಕಿರ್ಮಾನಿ.
ಚಿತ್ರ: ಆರ್. ಶ್ರೀಕಂಠಶರ್ಮ





1983ರಲ್ಲಿ ವೆಸ್ಟ್ ಇಂಡೀಸ್ ತಂಡವನ್ನು ಲಾರ್ಡ್ಸ್‌ನಲ್ಲಿ ಮಣಿಸಿದ ಭಾರತ ತಂಡದ ನಾಯಕ ಕಪಿಲ್ ದೇವ್‌ರ ಸಂಭ್ರಮ ಈ ಬಾರಿ ಮರುಕಳಿಸೀತೆ?

ಮತ್ತೊಂದು ವಿಶ್ವಕಪ್ ಎದುರಾಗಿದೆ. ಗರ್ಜನೆಗೆ ಕೊಹ್ಲಿ ಬಳಗ ಸಿದ್ಧವಾಗುತ್ತಿದೆ. ಭಾರತ ಈ ಬಾರಿ ವಿಶ್ವಕಪ್ ಗೆಲ್ಲುತ್ತಾ? ಮಹತ್ವದ ಟೂರ್ನಿಯಲ್ಲಿ ತಂಡವನ್ನು ಗೆಲ್ಲಿಸುವಂಥ ಆಟಗಾರರು ತಂಡದಲ್ಲಿ ಇದ್ದಾರೆಯೇ? ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಈ ಬಾರಿಯೂ ಬಗ್ಗುಬಡಿಯುತ್ತಾರಾ? ಕೊಹ್ಲಿ ಎಷ್ಟು ರನ್ ಗಳಿಸಬಹುದು? ಯಾವ ತಂಡದಿಂದ ಅಪಾಯ ಎದುರಾಗಬಹುದು?

ಹೀಗೆ, ಹಲವಾರು ಪ್ರಶ್ನೆಗಳು ಭಾರತದ ಕ್ರಿಕೆಟ್ ಪ್ರೇಮಿಗಳನ್ನು ಕಾಡುತ್ತಿವೆ. ಒಂದೂವರೆ ತಿಂಗಳ ಕ್ರಿಕೆಟ್ ಸವಿಯನ್ನು ಕಣ್ತುಂಬಿಕೊಳ್ಳಲು ಕ್ರೀಡಾಭಿಮಾನಿಗಳು ಕಾತರದಿಂದ ಕಾಯುತ್ತಿದ್ದಾರೆ.

ಒಮ್ಮೆ ಹೊಸ ಚಿಗುರು ಹಳೆ ಬೇರು ರೀತಿಯ ಭಾರತ ತಂಡದ ಆಟಗಾರರ ಸಾಮರ್ಥ್ಯವನ್ನು ನೆನಪಿಸಿಕೊಳ್ಳಿ. ವಿರಾಟ್ ಕೊಹ್ಲಿ, ರೋಹಿತ್ ಶರ್ಮ, ಶಿಖರ್ ಧವನ್, ಮಹೇಂದ್ರ ಸಿಂಗ್ ಧೋನಿ ಇಷ್ಟೂ ಜನರ ಒಟ್ಟು ಶತಕಗಳ ಸಂಖ್ಯೆ 89. ಏಕದಿನ ಪಂದ್ಯಗಳಲ್ಲಿ ಭಾರತದ ಗತಿ–ಸ್ಥಿತಿಗೆ ಇದೇ ಪುಷ್ಟಿ. ಈ ಸಲದ ವಿಶ್ವಕಪ್ ತಂಡದಲ್ಲಿ ಇವರೆಲ್ಲರೂ ಇದ್ದಾರೆ. ಹತ್ತುಮುಕ್ಕಾಲು ಸಾವಿರಕ್ಕೂ ಹೆಚ್ಚು ರನ್‌ಗಳ ದಟ್ಟ ಅನುಭವದ ನಾಯಕ ಕೊಹ್ಲಿ ಹಾಗೂ ಎಂಟು ಸಾವಿರಕ್ಕೂ ಹೆಚ್ಚು ರನ್ ಗಳಿಸಿರುವ, ಸಂಯಮದಲ್ಲೂ ದಾಳಿಕೋರನಾಗಬಲ್ಲ ಬ್ಯಾಟ್ಸ್‌ಮನ್ ರೋಹಿತ್ ಶರ್ಮ ತಂಡದ ಬಹುದೊಡ್ಡ ಶಕ್ತಿಯುಗಳು. ವಿರಾಟ್ 'ಚೇಸಿಂಗ್ ಮಾಸ್ಟರ್'. ರೋಹಿತ್ ದೊಡ್ಡ ಇನಿಂಗ್ಸ್‌ಗಳ ಊಟೆ. 2015ರ ವಿಶ್ವಕಪ್‌ನಲ್ಲಿ ಐವತ್ತೊಂದು ಚಿಲ್ಲರೆ ಸರಾಸರಿಯಲ್ಲಿ ರನ್ ಗಳಿಸಿದ್ದವರು ಧವನ್. ದಾಖಲೆಗಳ ಮಾತು ಕೇಳಿದರೆ ವಿಶ್ವದರ್ಜೆಯ ಶ್ರೇಷ್ಠ ಬ್ಯಾಟ್ಸ್‌ಮನ್‌ಗಳ ತಂಡ ಭಾರತ ಎನ್ನುವುದು ನಿಸ್ಸಂಶಯ.

ಮಧ್ಯಮ ಕ್ರಮಾಂಕದ ಸ್ಥಿರತೆ ತಂಡಕ್ಕೆ ತಲೆನೋವಾಗಿರುವ ಸಂಗತಿ. ಕೆ.ಎಲ್. ರಾಹುಲ್, ವಿಜಯ್ ಶಂಕರ್, ಧೋನಿ – ಈ ಪೈಕಿ ಯಾರು ಆ ಕೊರತೆ ನೀಗಿಯಾರು ಎಂಬ ಪ್ರಶ್ನೆ ಇದ್ದೇ ಇದೆ.

ಇಂಗ್ಲೆಂಡ್ ಪರಿಸ್ಥಿತಿಗೆ ಹಾರ್ದಿಕ್ ಪಾಂಡ್ಯ ಸೂಕ್ತ ಆಲ್‌ರೌಂಡರ್ ಎನ್ನುವುದು ಬೋನಸ್ಸು. ಅವರ ಸ್ಟ್ರೈಕ್‌ರೇಟ್ 113 ಚಿಲ್ಲರೆ. ಯಜುವೇಂದ್ರ ಚಾಹಲ್ ಸ್ಪಿನ್ ಮೂಲಕ ತಬ್ಬಿಬ್ಬುಗೊಳಿಸಬಲ್ಲ ಚಾಲಾಕಿ. ಕುಲದೀಪ್ ಯಾದವ್ ಚೈನಾಮನ್‌ಗಳೂ ಆಗೀಗ ನೆರವಿಗೆ ಬರಬಲ್ಲವು. ರವೀಂದ್ರ ಜಡೇಜಾ ಶೈಲಿಯ ಬೌಲಿಂಗ್ ಇಂಗ್ಲೆಂಡ್ ನೆಲಕ್ಕೆ ಹೊಂದುತ್ತದೆ. ಬ್ಯಾಟಿಂಗ್‌ನಲ್ಲಿ ದೊಡ್ಡ ಹೊಡೆತಗಳನ್ನು ಕೊಡಬಲ್ಲ ಅವರು ಫೀಲ್ಡಿಂಗ್‌ನಲ್ಲಿ ಬಲು ಚುರುಕು.

ವೇಗದ ಬೌಲಿಂಗ್ ಪಡೆಯಲ್ಲಿ ಎದ್ದುಕಾಣುವ ಹೆಸರು ಜಸ್‌ಪ್ರೀತ್ ಬೂಮ್ರಾ. ಅಂತಿಮ ಓವರ್‌ಗಳಲ್ಲಿ ಅವರ ಯಾರ್ಕರ್ ಪರಿಣಾಮಕಾರಿ. ಐಸಿಸಿ ರ‍್ಯಾಂಕಿಂಗ್‌ನಲ್ಲಿ ಅವರೀಗ ನಂ. 1 ಬೌಲರ್. ಗುಡ್ ಲೆಂಗ್ತ್, ಭುವನೇಶ್ವರ್ ಕುಮಾರ್ ಸ್ವಿಂಗ್ ಹೇಗೆ ವಿಕೆಟ್‌ಗಳನ್ನು ದಕ್ಕಿಸಿಕೊಟ್ಟಾವು ಎನ್ನುವ ನಿರೀಕ್ಷೆ ಇದೆ. ಬೂಮ್ರಾ ಎಸೆತಗಳ ವೇಗದಲ್ಲಿ ಮಾಡುವ ಊಹಾತೀತ ಬದಲಾವಣೆ ಕುತೂಹಲಕಾರಿ. ಮೂವರ ಖಾತೆಗಳಲ್ಲೂ ಸೇರಿ ಏಕದಿನದ ಪಂದ್ಯಗಳಲ್ಲಿ 306 ವಿಕೆಟ್‌ಗಳಿವೆ. ಈ ಎಲ್ಲರನ್ನೂ ಅನುಭವದ ಸೂತ್ರದಲ್ಲಿ ಕಟ್ಟಿಹಾಕಬಲ್ಲ ಮಾರ್ಗದರ್ಶಕನಾಗಿ ಧೋನಿ ಕಾಣುತ್ತಿದ್ದಾರೆ. ವಿಶ್ವದ ನಂ. 2 ತಂಡ ಭಾರತ ಈ ಸಲದ ಫೇವರಿಟ್‌ಗಳಲ್ಲಿ ಒಂದು.

ಭಾರತದ ಆಟಗಾರರು ಪ್ರತಿ ಬಾರಿ ಕಣಕ್ಕಿಳಿದಾಗ ಗೆಲ್ಲಲೇಬೇಕು ಎಂಬ ನಿರೀಕ್ಷೆ ಅಭಿಮಾನಿಗಳದ್ದು. ಅವರದ್ದು ಭಾವನಾತ್ಮಕ ಸಂಬಂಧ. ಗೆದ್ದಾಗ ಆಟಗಾರರನ್ನು ದೇವರಂತೆ ಪೂಜಿಸುವ ಈ ಅಭಿಮಾನಿಗಳು ಸೋತಾಗ ಅದೇ ಆಟಗಾರರ ಮನೆಗೆ ಕಲ್ಲು ಎಸೆದಿದ್ದೂ ಇದೆ. ಅದು ಇವತ್ತಿನದ್ದಲ್ಲ. 80, 90ರ ದಶಕದಲ್ಲಿ ಈ ಕ್ರಿಕೆಟ್ ಹುಚ್ಚು ಉತ್ತುಂಗದಲ್ಲಿತ್ತು. ಕ್ರಿಕೆಟ್ ಆಟ ತುಂಬಾ